ಕರ್ನಾಟಕ ವಿಧಾನ ಸಭೆ

ಮಂಗಳವಾರ, ದಿನಾಂಕ ೧೦ನೇ ಫೆಬ್ರುವರಿ ೧೯೮೭

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೦ ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು

ಶ್ರೀಮತಿ ಲೀಲಾದೇವಿ ಪ್ರಸಾದ್.—(ಸದಸ್ಯರು ಹಾಜರಿಲ್ಲ)

ಶ್ರೀ ಎಸ್. ಕೆ. ಕಾಂತಾ.—(ಸದಸ್ಯರು ಹಾಜರಿಲ್ಲ)

ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಅಭ್ಯರ್ಥಿಗಳ ನೇಮಕಾತಿ

೧೪೦ (೨೨೦೬) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಒಮ್ಮೆ ಹಂಚಿಕೆ ಮಾಡಿದ ನಂತರ ಕಾನೂನು ಉಲ್ಲಂಘನೆ ಮಾಡಿ ಮರು ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು):—

ಅ) ಸರ್ವೆ ಸಾಮಾನ್ಯವಾಗಿ ಮರು ಹಂಚಿಕೆ ಮಾಡಲು ಅವಕಾಶವಿಲ್ಲ. ಆದರೆ ಒಂದೆರಡು ಸಂದರ್ಭಗಳಲ್ಲಿ ಸಾರ್ವಜನಿಕ ಹಿತ ದೃಷ್ಟಿಯಿಂದ ಮರು ಹಂಚಿಕೆ ಮಾಡಲು ಸರ್ಕಾರದ ಅನುಮತಿ ನೀಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಸರ್ವೇ ಸಾಮಾನ್ಯವಾದ ದೃಷ್ಟಿಯಿಂದ ಕೇಳಿಲ್ಲ. ಒಂದು ಸಾರಿ ಹಂಚಿಕೆ ಮಾಡಿದ ಮೇಲೆ ಮರು ಹಂಚಿಕೆಗೆ ಕಾನೂನು ಪ್ರಾಪ್ತಿಯಲ್ಲಿ ಅವಕಾಶ ಇದೆಯೇ ? ಮರು ಹಂಚಿಕೆಗೆ ಮುಖ್ಯ ಕಾರ್ಯದರ್ಶಿಯವರು ಪತ್ರ ಬರೆದಿದ್ದಾರೆ. ಆ ಪತ್ರ ಕೂಡ ನನ್ನ ಹತ್ತಿರ ಇದೆ. ಅವರು ಏನು ಹೇಳಿದ್ದಾರೆಂದರೆ, ಮೇಲ್ಕಂಡ ಸರ್ಕಾರೀ ಸೇವಾ ಗ್ರೂಪ್-ಸಿ ಹುದ್ದೆಗೆ ಒಮ್ಮೆ ಒಂದು ಇಲಾಖೆಗೆ ಹಂಚಿಕೆ ಮಾಡಲ್ಪಟ್ಟ ಅಭ್ಯರ್ಥಿಗಳನ್ನು ಬೇರೆ ಇಲಾಖೆಗೆ ಮರು ಹಂಚಿಕೆ ಮಾಡಲು ಅವಕಾಶ ಇಲ್ಲ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ತಾವು ಪ್ರಶ್ನೆ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಇಲ್ಲಿ ನಿಯಮ ಉಲ್ಲಂಘನೆ ಆಗಿದೆ, ಇದು ಸರ್ವೇ ಸಾಮಾನ್ಯವಾಗಿ ಆಗತಕ್ಕದ್ದು ಅಲ್ಲ. ಕಾನೂನು ಉಲ್ಲಂಘನೆ ಆದಲ್ಲಿ ತಿದ್ದುಪಡಿ ಮಾಡಿ ಮುತಕ್ಕೆ ಬರುತ್ತದೆ. ಕಾನೂನು ಉಲ್ಲಂಘನೆ ಮಾಡಿ ಹಂಚಿಕೆ ಆಗಿರುವಲ್ಲಿ ಭ್ರಷ್ಟಾಚಾರಕ್ಕೆ ಎಡೆಕೊಟ್ಟಂತಾಗಿದೆ. ಇಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇದುವರೆಗೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ. ಯಾರು ಯಾರಿಗೆ ಹಂಚಿಕೆ ಆಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಮರು ಹಂಚಿಕೆ ಸಾಮಾನ್ಯವಾಗಿ ಆಗುವುದಿಲ್ಲ. ಒಂದೊಂದು ಇಲಾಖೆಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಆ ಇಲಾಖೆಯಲ್ಲೇ ನೇಮಿಸಲಾಗುತ್ತದೆ. ಪಿ. ಎಸ್. ಸಿ. ಯವರು ಏನು ರೆಕಮೆಂಡ್ ಮಾಡುತ್ತಾರೆ ಆ ಪ್ರಕಾರ ಹಂಚಿಕೆಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮರು ಹಂಚಿಕೆ ಮಾಡತಕ್ಕ ಅಗತ್ಯ ಬೀಳುತ್ತದೆ. ಆಗ ಮಾಡಬೇಕಾಗುತ್ತದೆ. ಉದಾಹರಣೆಗೆ ಆಹಾರ ಖಾತೆಯಲ್ಲಿ ಹೊಸ ಕಾರ್ಯಕ್ರಮ ಜಾರಿಗೆ ತರಲು ಹೆಚ್ಚು ಹುದ್ದೆಗಳು ಬೇಕಾಗಿತ್ತು. ಆಗ ಬೇರೆ ಖಾತೆಗೆ ಆಯ್ಕೆಯಾಗಿದ್ದ ಅಭ್ಯರ್ಥಿಗಳನ್ನು ಈ ಖಾತೆಗೆ ಹಾಕಬೇಕೆಂದು ನಿರ್ಣಯ ಮಾಡಿದ್ದು ನಿಜ. ಸರ್ವೇ ಸಾಮಾನ್ಯವಾಗಿ ಇದನ್ನು ಮಾಡುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಕಾನೂನು ಜಾರಿಯಲ್ಲಿರಬೇಕಾದರೆ ಆ ತರಹ ಮರು ಹಂಚಿಕೆ ಮಾಡುವುದಕ್ಕೆ ಹೇಗೆ ಬರುತ್ತದೆ ? ಅದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೆ ? ಸರ್ವೇ ಸಾಮಾನ್ಯವಾದ ಪರಿಸ್ಥಿತಿಯಲ್ಲಿ ಅಥವಾ ವಿಶೇಷ ಸಂದರ್ಭಗಳಲ್ಲಿ ಮಾಡಬಹುದೆಂದು ಆರ್ಟಿಕಲ್ಲಿನಲ್ಲಿ ಅವಕಾಶ ಇದ್ದರೆ ಮಾಡಬಹುದು. ಇಲ್ಲದೆ ಇದ್ದಾಗ ಮಾಡಿದರೆ ಅದು ತಪ್ಪಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಯಾವ ತರಹದ ನಿಬಂಧನೆಯೂ ಇಲ್ಲ. ೧೯೭೮ ರಲ್ಲಿ ಏನು ಸರ್ವಿಸ್ ರೂಲ್ಸ್ ಮಾಡಿದ್ದೇವೆ ಅದರಲ್ಲಿ ಮರು ಹಂಚಿಕೆ ಮಾಡಕೂಡದು ಎಂಬ ನಿರ್ಬಂಧ ಇಲ್ಲ.

ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ವ್ಯಾಪ್ತಿಯ ಬಗ್ಗೆ

೧೪೧ (೨೭೧) ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿಯ ಕರ್ತವ್ಯಗಳು ಹಾಗೂ ಅದರ ವ್ಯಾಪ್ತಿ ಏನು ?

ಆ) ಈ ಸಮಿತಿಯು ಸರ್ಕಾರದ ಎಲ್ಲಾ ಇಲಾಖೆಗಳ ಮೇಲೆ ವಿಧಿಪತ್ರಾಗಿ ಆದೇಶ ಕೊಡುವ ಹಕ್ಕು ಹೊಂದಿದೆಯೇ ?

ಇ) ಕಾರ್ಯಾಂಗದ ಎಲ್ಲಾ ಇಲಾಖೆಗಳಿಗೂ ಮತ್ತು ಶಾಸಕಾಂಗಕ್ಕೂ ನಿರ್ದೇಶನ ಕೊಡುವ ಹಕ್ಕು ಈ ಸಮಿತಿ ಹೊಂದಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರವು ಈ ಸಮಿತಿಯು ಹೊರಡಿಸಿರುವ ನಿರ್ದೇಶನಗಳು ಮತ್ತು ಹೇಳಿಕೆಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಅನುಬಂಧ ೧ ರಲ್ಲಿ ವಿವರಿಸಿರುವಂತೆ.

ಆ) ಮತ್ತು ಇ) ಆಡಳಿತ ಭಾಷೆಗೆ ಸಂಬಂಧಿಸಿದ ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ ೧೯೬೩ರ ನಿಯಮಗಳನ್ನು ಮತ್ತು ಇದರ ಪ್ರಕಾರ ಹೊರಡಿಸಿರುವ ಅಧಿಸೂಚನೆ ಮುಂತಾದ ಆದೇಶಗಳನ್ನು ಜಾರಿಗೆ ತರುವಲ್ಲಿರುವ ತೊಂದರೆಗಳನ್ನು ಪರೀಕ್ಷಿಸಿ ಸಲಹೆ ನೀಡುವ ಹಕ್ಕನ್ನು ಹೊಂದಿದೆ.

ಈ) ಸಮಿತಿ, ನಿರ್ದೇಶನ ಹಾಗೂ ಹೇಳಿಕೆಗಳನ್ನು ಹೊರಡಿಸಿಲ್ಲ.

ಅನುಬಂಧ—I

ಕರ್ತವ್ಯಗಳು ಹಾಗೂ ಕಾರ್ಯವ್ಯಾಪ್ತಿ :

೧. ಮಹಾಜನ ಆಯೋಗದ ವರದಿಯ ಚೌಕಟ್ಟಿನಲ್ಲಿ ಗಡಿ ವಿಷಯವಾಗಿ ರಾಜ್ಯ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.

೨. ಸರ್ಕಾರದ ರಾಜ ಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳಿಗೆ ಕಟ್ಟುನಿಟ್ಟಾಗಿ ಪ್ರೇರಿಸಿರುವುದೇ?